<?xml version="1.0" ?>
<?xml-stylesheet type="text/css" href="home.css"?>

<Doc id="kan-w-media- KA00004 " lang="Kannada">
<Header type="text">
<encodingDesc>
<projectDesc> CIIL-Kannada Corpora, Monolingual Written Text </projectDesc>
<samplingDesc> Simple written text only has been transcribed. Diagrams, pictures, tables and verses have been omitted. Samples taken from page 30-31, 60-61, 90-91, 120-121, 152-153, 180-181, 210-211, 240-241, 270-271, 304-305 </samplingDesc>
</encodingDesc>
<sourceDesc>
<biblStruct>
<source> SRLC
<category> Aesthetics </category>
<subcategory> Literature-Novels </subcategory>
<text> Book </text>
<title> dEvara vikarALagaLu</title>
<vol> </vol>
<issue> </issue>
</source>
<textDes>
<type> </type>
<headline> dEvara vikarALagaLu</headline>
<author> eM. mukuMdan </author>
<translator> en. dAmOdara sheTTi </translator>
<words> 2007 </words>
</textDes>
<imprint>
<pubPlace> New Delhi-India </pubPlace>
<publisher> sAhitya akAdemi </publisher>
<pubDate> </pubDate>
</imprint>
<idno type="CIIL code"> S55990 </idno>
<index> KA00004 </index>
</biblStruct>

</sourceDesc>
<profileDesc>
<creation>
<date> 23-Aug-2006 </date>
<inputter> L.Shashikala </inputter>
<proof> Vijayalaxmi Patil </proof>
</creation>
<langUsage> Kannada </langUsage>
<wsdUsage>
<writingSystem id="ISO/IEC 10646">Universal Multiple-Octet Coded Character Set (UCS).
</writingSystem>
</wsdUsage>
<textClass>
<channel mode="w"> print </channel>
<domain type="public">  </domain>
</textClass>
</profileDesc>
</Header>
<text><body>

<p> ಅವರು ಅವಳ ಹತ್ತಿರ ಸರಿದು ನಿಂತರು. ಅವಳ ಹಿಂದುಗಡೆ ಬರಿಯ ಬಿಳುಪು. ಕೈಚಾಚಿದರೆ ಮುಟ್ಟಬಹುದಾದಷ್ಟು ಹತ್ತಿರದಲ್ಲಿ ಅವಳೀಗ ನಿಂತಿದ್ದಳು. ಅವಳ ಮಧುರವಾದ ಶ್ವಾಸ ಅವರ ಮುಖದ ಮೇಲೆ ಬಿತ್ತು. ಅವಳನ್ನು ಎದೆಗೆ ಆನಿಸಿಹಿಡಿದು ಬೆಚ್ಚಗಿನ ಕೂದಲಿನಲ್ಲಿ ಕೈಯಾಡಿಸುವುದಕ್ಕೂ ಮಡಿಲಲ್ಲಿ ಕುಳ್ಳಿರಿಸಿ ಓಲೈಸುವುದಕ್ಕೂ ಕೊನೆಗೆ ಮಂಚದಲ್ಲಿ ಜೊತೆಯಾಗಿ ಮಲಗುವುದಕ್ಕೂ ಅವರು ಬಯಸಿದರು. ಆ ಮೋಹ ಅತಿಯಾಗಿ ಅವರ ಕಿಬ್ಬೊಟ್ಟೆಯಲ್ಲೂ ತೊಡೆಗಳಲ್ಲೂ ನಡುಕ ಆವರಿಸಿತು. </p>

<p> ‘ಒಮ್ಮೆ ಮುಟ್ಲೆಯಾ. ಒಮ್ಮೆ ಮಾತ್ರ...’ </p>

<p> ‘ನನ್ನ ಮುಟ್ಟೋದಕ್ಕೆ ಯಾರಿಗೂ ಸಾಧ್ಯವಿಲ್ಲ.’ </p>

<p> ‘ಒಮ್ಮೆ ಮಾತ್ರ’ </p>

<p> ಬೆವರು ಕುಮಾರನ ಕಾಲುಗಳ ಮೂಲಕ ಕುದಿಯುವ ಲಾವಾರಸದಂತೆ ಹರಿದು ಇಂಗಿತು. ಅವರ ಎದೆಬಡಿತ ಹೆಚ್ಚಿತು. ಅವಳ ಕೆನ್ನೆಯಲ್ಲಿ ತಂಗಿದ್ದ ಶೋಕವು ಅಸದಳ ದುಃಖವಾಗಿ ಮಾರ್ಪಟ್ಟಿತು. ಕಾಡಿಗೆ ಹಚ್ಚಿದ ಕಣ್ಣುಗಳಲ್ಲಿ ನೀರುತುಂಬಿತು. ಅವರು ಕಂಗಾಲಾದರು ಅವರೊಳಗೆ ಬಿರುಗಾಳಿಯೊಂದು ಬೀಸಿ ದಾಟಿಹೋಯಿತು. </p>

<p> ‘ಅಮ್ಮ ಹೇಳಿದ್ದು ಕೇಳಿಸ್ಲಿಲ್ವ? ಇನ್ನೊಂದು ಮದುವೆ...’ </p>

<p> ಕುಮಾರನ್ ಕನ್ನಡಕವನ್ನು ಮೂಗಿನ ಮೇಲೆ ನೇರ್ಪುಗೊಳಿಸಿಟ್ಟು ಅವಳನ್ನು ನೋಡಿ ನಕ್ಕರು. ಮೃತ್ಯುವಿನ ಬಿಳಿಯ ರಾತ್ರಿಯಲ್ಲಿ ಕಮಲಬೆಳಕು ಹರಡಿ, ಕಣ್ಣುಗಳಲ್ಲಿ ಕಮಲಸೌಮ್ಯತೆಯನ್ನು ತುಂಬಿಕೊಂಡು ಕಮಲೆ ಅವರೆದುರು ನಿಂತಳು. </p>

<p> ‘ನನ್ನು ಮರ್ತುಬಿಡಿ. ಬೇರೊಬ್ಬಳನ್ನು...’ </p>

<p> ‘‘ನನ್ನಿಂದಾಗದು ಕಮಲೇ.’ </p>

<p> ‘ಇನ್ನೆಷ್ಟು ಕಾಲ ಕಳೀಲಿಕ್ಕುಂಟು...ಹೇಗೆ ಕಳ್ಯೋದು?’ </p>

<p> ‘ಈಗ ಕಳಿಯೋ ಹಾಗೇನೆ. ನೀ ಇಲ್ದಿದ್ರೂ ಶಶಿ ಶಿವ ಇಲ್ವ ನಂಗೆ?’ </p>

<p> ಅವರ ನಡುವೆ ಮತ್ತೊಮ್ಮೆ ಮೌನ ಆವರಿಸಿತು. ಅವಳನ್ನು ಮುಟ್ಟುವ ಆಸೆ ಮತ್ತೊಮ್ಮೆ ಅವರ ಬಳಿಗೆ ಧಾವಿಸಿಬಂತು. ಅದು ಗೊತ್ತಾಗಿಯೋ ಎಂಬಂತೆ ಅವಳು ಹಿಂದಕ್ಕೆ ಸರಿದಳು. ಅವಳ ಸುತ್ತಲಿದ್ದ ಬಿಳುಪು ಮಸುಕಾಯಿತು. ಹೊಗೆಯ ನಡುವೆಯೋ ಎಂಬಂತೆ ಚಿಗುರಿದ ಹಲಸೂ ಹೂಬಿಟ್ಟ ಹತ್ತಿಮರವೂ ಬೆಳಗಿದವು. ಅವರು ಮೂಗಿನಿಂದ ಕನ್ನಡಕ ತೆಗೆದು ಒರಸಿ ಚೀಲದಲ್ಲಿ ಮುಚ್ಚಿ ಪೆಟ್ಟಿಗೆಯಲ್ಲಿ ಭದ್ರಪಡಿಸಿದರು. ಅವರ ಅಂದಿನ ಭೇಟಿ ಹಾಗೆ ಕೊನೆಗೊಂಡಿತು. </p>

<p> ಮಂಚದಲ್ಲಿ ಕಾಲುಚಾಚಿ ಮಲಗಿದ ಅವರು ಯೋಚಿಸತೊಡಗಿದರು. ತಾನು ಕಮಲೆಯನ್ನು ಕಂಡದ್ದೂ ಅವಳೊಂದಿಗೆ ಮಾತನಾಡಿದ್ದೂ ಬರಿಯ ಕನಸಾಗಿತ್ತೆ? ಅಲ್ಫೋನ್ಸಯ್ಯ ತೋರಿಸಿದ ಜಾಲವಿದ್ಯೆಯಾಗಿತ್ತೆ? </p>

<p> ಹಾಸಿಗೆಯ ಕೆಳಗೆ ಜಮುಖಾನೆಯಲ್ಲಿ ಶಶಿಯೂ ಶಿವನೂ ಮಲಗಿ ನಿದ್ರಿಸಿದ್ದರು. ತಾಯಿಯಿಲ್ಲದ ಮಕ್ಕಳು. </p>

<p> ಮಳೆ ಬಂದು ಕೊಚ್ಚೆಯೆದ್ದ ಮಾರ್ಗದಲ್ಲಿ ಗಾಡಿ ಅಲುಗಾಡುತ್ತಾ ಮುಂದುವರಿಯಿತು. ಕುಞಾಮನೂ ಅವರ ತಂದೆ ಷೆಣಾಯಿ ವಕೀಲರೂ ಬಹಳಕಾಲ ಬಿಳಿಯರ ನಾಡಿನಲ್ಲಿದ್ದು ವಿದ್ಯಾಭ್ಯಾಸ ಪಡೆದವರು. ಅವರ ಕುಟುಂಬವೆಂದರೆ ಬಿಲ್ಲವರಿಗೆ ಅಭಿಮಾನ. ಕೆಲವು ಬಿಲ್ಲವರಿಗೆ  ಕುಞಾಮನ ಬಗ್ಗೆ ತಿರಸ್ಕಾರವೂ ಇತ್ತು. ತಮ್ಮ ಬಿಲ್ಲವತ್ತಿಯರು ರಾತ್ರಿ ಚಾಪೆಯಲ್ಲಿ ಸನಿಹದಲ್ಲೆ ಮಲಗಿ ಕುಞಾಮನ ಕುರಿತು ಮಾತನಾಡುತ್ತ ನಿಟ್ಟುಸಿರು ಬಿಡುವಾಗ ತಿರಸ್ಕಾರ ತೋರದಿರುವುದಕ್ಕೆ ಅವರಿಗಾದರೂ ಹೇಗೆ ಸಾಧ್ಯ? </p>

<p> ಜಟಕಾ ತಿರುಗಾಸು ದಾಟಿ ಸಮುದ್ರ ಬದಿಯ ಜಡ್ಜರ ಬಂಗಲೆಯ ಎದುರು ಬಂದು ನಿಂತಿತು. ಗೇಟಿನ ಸಣ್ಣ ಧ್ವಜಸ್ತಂಭದ ಮೇಲೆ ಬಿಳಿಯರ ಧ್ವಜ ಹಾರುತ್ತಿತ್ತು. ಒಳಗೆ ಕೊಮ್ಮಿಸ್ಸಾರೂ ಕುಟ್ಟಪ್ಪ ಸೆಬಾಸ್ಟಿನ್‌ರೂ  ಜಡ್ಜೂ ಕೈಯಲ್ಲಿ ತುಂಬಿದ ಗ್ಲಾಸುಗಳೊಂದಿಗೆ ನಿಂತಿದ್ದರು. ವ್ಯಾಪಾರಿಯಾದ ಕುಟ್ಟಪ್ಪ ಸೆಬಾಸ್ಟಿಯನ್ ಕಡುಜನಂತೆ ಕರಿಯನಾಗಿದ್ದರೂ ಕಣ್ಮಣಿಗಳಿಗೆ ನೀಲಿ ಬಣ್ಣವಿತ್ತು. ಕೊಮ್ಮಿಸ್ಸಾರಿನ ಎರಡು ಕಣ್ಣುಗಳಲ್ಲೂ ರಕ್ತದ ಕಲೆಗಳಿದ್ದುವು, ತುಂಬಿದ ಗ್ಲಾಸುಗಳೊಂದಿಗೆ ನಿಂತಿದ್ದ ಅವರು ಏನನ್ನೋ ಆಘೋಷಿಸುವವರಂತೆ ತೋರಿದರು. </p>

<p> 'ಗಾಂಧಿ ಸತ್ತ.' </p>

<p> ಕುಟ್ಟಪ್ಪ ಸೆಬಾಸ್ಟಿಯನ್ ಬೆತ್ತದ ಕುರ್ಚಿಯಲ್ಲಿ ಒರಗಿ ಕುಳಿತರು. ಕುಞಾಮನ್‌ಗೆ ಅಲ್ಲಿಯ ತನಕ ಆ ವಿಚಾರ ಗೊತ್ತಾಗಿರಲಿಲ್ಲ. ಅವರೂ ಸಂತುಷ್ಟರಾಗಿ ಒಂದು ಗ್ಲಾಸನ್ನು ತೆಗೆದುಕೊಂಡರು. ಬಾಟ್ಲಿ ಅದಕ್ಕೆ ಬಗ್ಗಿಕೊಂಡಿತು. </p>

<p> 'ಅವ ಸತ್ತದ್ದು ಹೇಗೆ?' </p>

<p> 'ಕೊಂದದ್ದು.' </p>

<p> ದಾರಿಯಲ್ಲಿ ನಡೆದುಹೋಗುತ್ತಿದ್ದ ಮಯ್ಯಳಿಯ ಕೆಲವರ ಬಟ್ಟೆಯ ಮೇಲೆ ಕಪ್ಪು ಬೇಡ್ಜು ಕಾಣಿಸುತ್ತಿತ್ತು. ಇಳಿಬಿಸಿಲಿಗೆ ಬೋರಲಾಗಿ ಮಲಗಿದಂತೆ ಕಾಣುತ್ತಿದ್ದ ರಾಜಬೀದಿಯ ಮೂಲಕ ಶೋಕಯಾತ್ರೆಯೊಂದು ದಾಟಿಹೋಯಿತು. ಪಾರಿವಾಳಗಳಂತೆ ಕಂಪಿಸುವ ಖಾದಿ ಟೊಪ್ಪಿಗಳು ಮೌನವಾಗಿ ನಡೆದುಹೋದುವು..... </p>

<p> ಆ ಜಡ್ಜೂ ಕೊಮ್ಮಿಸ್ಸಾರೂ ಕುಟ್ಟಪ್ಪ ಸೆಬಾಸ್ಟಿಯನರೂ ಈಗ ಇಲ್ಲ. ಸ್ವಂತ ಊರಿನಲ್ಲಿದ್ದು ಗಡಿಪಾರುಗೊಂಡವನಂತೆ ಕುಞಾಮನ್ ಮಾತ್ರ ಉಳಿದುಕೊಂಡಿದ್ದರು. </p>

<p> 'ಎಷ್ಟು ದಿವಸಾಯ್ತು ನೀವೊಮ್ಮೆ ಹೊರಗೆ ಹೊರಟು? ' </p>

<p> ದಮಯಂತಿ ಗಂಡನ ಹತ್ತಿರ ಬಂದು ನಿಂತರು. ಅವರ ಕೊರಳಿನಲ್ಲಿ ಎಂಟು ಪವನಿನ ನೆಕ್‌ಲೇಸೂ ಕೈಗಳಲ್ಲಿ ಮೊಣಗಂಟಿನವರೆಗೆ ಚಿನ್ನದ ಬಳೆಗಳೂ ಇದ್ದುವು. </p>

<p> 'ನಾವ್ಯಾಕೆ ಹೆದರ್ಬೇಕು?' ಗಂಡನಿಗಿಂತ ಧೈರ್ಯ ದಮಯಂತಿಗೆ. 'ಹತ್ತು ಜನ್ಮಕ್ಕಾಗುವಷ್ಟು ನಾವು ಸಂಪಾದನೆ ಮಾಡ್ಲಿಲ್ವೆ?'
</p>

<p> ಕುಞಾಮನ್ ನಿಧಾನವಾಗಿ ಒಮ್ಮೆ ನಿಟ್ಟುಸಿರಿಟ್ಟರು. ಎಷ್ಟೋ ಹೊತ್ತಿನಿಂದ ಅವರು ಕೋಣೆಯಲ್ಲೇ ಕುಳಿತುಕೊಳ್ಳುತ್ತಲೂ ಎದ್ದು ನಡೆಯುತ್ತಲೂ ಇದ್ದರು. ದಮಯಂತಿ ಅನುಕಂಪದೊಂದಿಗೆ ಗಂಡನ ತಲೆಯನ್ನು ನೇವರಿಸಿದರು. ಅವರ ತಲೆಕೂದಲಷ್ಟೂ ಉದುರಿಹೋಗಿದ್ದುವು. ತಲೆಬಿಸಿಯಿಂದಲೇ ಇರಬೇಕು. </p>

<p> ಕುಂಜಿರುತೆಯ ಕಣ್ಣುಗಳಲ್ಲಿ ಮತ್ತೊಮ್ಮೆ ನೀರುತುಂಬಿತು. ಅಡಿಗೆಮನೆಯ ಬಾಗಿಲೆಡೆಯಲ್ಲಿ ವಲ್ಲಿಯ ಮುಖವನ್ನು ಅವರು ಕಂಡರು. ದೀನತೆ ತುಂಬಿದ ಎರಡು ದೊಡ್ಡ ಕಣ್ಣುಗಳು. </p>

<p> ‘ಇಲ್ಲಿಗೆ ಬಾ ವಲ್ಲೀ.’ </p>
<p> ಅವಳು ಸಂಕೋಚಪಟ್ಟುಕೊಂಡು ಕುಮಾರನ ಬಳಿಗೆ ಬಂದುನಿಂತಳು. ಒಲೆಯ ಬೆಂಕಿಯಿಂದಲೋ ಎಂಬಂತೆ ಅವಳ ಕಣ್ಣುಗಳು ಕಲಕಾಗಿದ್ದುವು. ಉಟ್ಟದ್ದೆಲ್ಲ ಒದ್ದೆಯಾಗಿತ್ತು. </p>
<p> ‘ನೀ ಶಾಲೆಗೋಗ್ಲಿಲ್ವ? ’ </p>
<p> ‘ಇಲ್ಲ.’ </p>
<p> ‘ಬಾಲಗೋಪಾಲನೂ ರೋಹಿಣಿಯೂ..... ?’ </p>
<p> ‘ಅವರೂ.’ </p>
<p> ರೋಹಿಣಿ ದಿಣ್ಣೆಯ ಮೇಲೆ ಒಬ್ಬಳೆ ಕುಳಿತು ದಾಳ ಉರುಳಿಸುತ್ತಿದ್ದಳು. ಯಾಕೆ ಯಾರೂ ಶಾಲೆಗೆ ಹೋಗಲಿಲ್ಲ ಎಂದು ಕೇಳುವುದಕ್ಕೆ ಅವರಿಗೆ ಧೈರ್ಯವಿರಲಿಲ್ಲ! ಮೊದಲು ವಲ್ಲಿ ಮಾತ್ರ ಶಾಲೆಗೆ ಹೋಗುತ್ತಿದ್ದಳು. ಮಾಧವನ್ ಬೊಂಬಾಯಿಯಿಂದ ಬಂದನಂತರ ಬಾಲಗೋಪಾಲನನ್ನೂ ರೋಹಿಣಿಯನ್ನೂ ಶಾಲೆಗೆ ಸೇರಿಸಿದ. ವಲ್ಲಿ ಬೇಗ ಕಲಿಕೆ ನಿಲ್ಲಿಸಿದಳು. ಆಸ್ಪತ್ರೆಯಲ್ಲಿ ಕೆಲಸಮಾಡಿಯೂ ಮಕ್ಕಳನ್ನು ನೋಡಿಕೊಂಡೂ ಕುಂಜಿರುತೆಗೆ ಸಾಕಾಗುತ್ತಿತ್ತು. ಆದ್ದರಿಂದ ಅವಳು ಶಾಲೆ ಬಿಟ್ಟುಬಿಟ್ಟಳು. </p>
<p> ಮಾಧವನ್ ಹೋಗಿ ವರ್ಷ ಎರಡಾದವು. ಯಾವೊಂದು ಸುದ್ದಿಯೂ ಇಲ್ಲ. ಒಂದು ಕಾರ್ಡು ಕೂಡ. </p>
<p> ಕುಂಜಿರುತೆಯ ಅನಾರೋಗ್ಯಕ್ಕೆ ಅದುವೇ ಕಾರಣ ಎಂಬುದು ಕುಮಾರನ್‌ಗೆ ಗೊತ್ತು. ಮದ್ದು ಕುಡಿಯುವುದರಿಂದಲೋ ಟರ್ಪನ್ ಟಯಿನ್ ಹಚ್ಚುವುದರಿಂದಲೋ ಅದು ವಾಸಿಯಾಗದು. </p>
<p> ‘ಅದೂ ಇದೂ ಯೋಚ್ನೆಮಾಡಿ ಮನಸ್ಸು ಹುಣ್ಣುಮಾಡ್ಬೇಡ. ಮಾಧವ ಬಂದಾನು.’ </p>
<p> ಅವರು ಆಕೆಯನ್ನು ಸಮಾಧಾನ ಪಡಿಸುವುದಕ್ಕೆ ಪ್ರಯತ್ನಿಸಿದರು. ಕುಂಜಿರುತ ದೀರ್ಘವಾಗಿ ಒಮ್ಮೆ ನಿಟ್ಟುಸಿರು ಬಿಟ್ಟರು. </p>
<p> ಮಧ್ಯಾಹ್ನವಾಗಲಿಕ್ಕಾಯಿತಾದರೂ ಹೊರಗೆ ಬಿಸಿಲಿರಲಿಲ್ಲ. ಮೋಡಗಳ ದೊಡ್ಡ ಕರಿನೆರಳುಗಳು ಮನೆಗಳ, ಮರಗಳ ಮೇಲಿನಿಂದ ದಾಟಿಹೋಗುತ್ತಿದ್ದುವು. ಸ್ವಚ್ಛ ಹೊಳೆಯಲ್ಲಿ ಆಕಾಶದ್ದೂ ಮೋಡಗಳದ್ದೂ ನೆರಳುಗಳು ತುಂಬಿಕೊಂಡಿದ್ದುವು. ಆಕಾಶದಿಂದ ಕೆಳಕ್ಕೆ ಇಳಿದುಬಂದ ಅಲ್ಫೋನ್ಸಯ್ಯ ಹೇಳಿದರು:‘ಅಲ್ಲಿ ಮೇಲೆ ತುಂಬಾ ಮಳೆಮೋಡಗಳುಂಟು. ಈಗ ಮಳೆ ಸುರೀತದೆ.’ </p>
<p> ಕುಮಾರನ್ ಆಚಾರ್ತಿ ಮಾಕಂಳ ಕೈಯಲ್ಲಿ ಕುಂಜಿರುತೆಗೆ ಅಕ್ಕಿ, ತೆಂಗಿನಕಾಯಿ ಕೊಟ್ಟು ಕಳುಹಿಸಿದರು. ವೃಷಭದ ಉತ್ತರಾರ್ಧ ಪ್ರಾರಂಭವಾಗಬೇಕಿದ್ದರೆ ತನ್ನದೇ ಖರ್ಚಿನಲ್ಲಿ ಅವಳ ಮನೆಗೆ ಹುಲ್ಲೂ ಹೊದೆಸಿದರು. ರೋಹಿಣಿಯನ್ನೂ ಬಾಲಗೋಪಾಲನನ್ನೂ ಒತ್ತಾಯಮಾಡಿ ಶಾಲೆಗೆ ಕಳುಹಿಸಿದರು. </p>
<p> ‘ನಮ್ಮತ್ರ ದುಡ್ಡಿಲ್ಲ’ ವಂತಿಗೆಗೆ ಬರುವವರ ಹತ್ತಿರ ಅಸ್ಸನಾರ್ ಹೇಳುತ್ತಿದ್ದರು: ‘ಬೇಕಿದ್ರೆ ಸ್ವಲ್ಪ ಹುಳಿಯೋ ಮೆಣಸೋ ತಕ್ಕೊಳ್ಳಿ.’ </p>
<p> ಆದ್ರೆ ಅದೂ ಕೂಡ ಇದ್ದೀತೆಂದು ಹೇಳಲಾಗದು. ಏಳು ಮಕ್ಕಳನ್ನು ಸಾಕುವುದಕ್ಕೆಂದು ಅಂಗಡಿ ತೆರೆದು ವ್ಯಾಪಾರ ಶುರುಮಾಡಿದ್ದು. ಈಗ ಅಂಗಡಿಯನ್ನು ಸಾಕುವುದಕ್ಕೂ ಅವನಿಗೆ ದಾರಿ ಇಲ್ಲವಾಗಿದೆ. ಮಯ್ಯಳಿಯವರು ಬಾಯಿಗೆ ಬಂದದ್ದು ಆಡುತ್ತಾರೆ. ದೊಡ್ಡಮಗಳು ರುಕಿಯಾ ಖರ್ಚಿಗೆ ಬೇಕಾದ ಹಣವನ್ನು ಸಂಪಾದಿಸಿ ಕೊಡುತ್ತಾಳೆ ಎಂದು. ಅಸ್ಸನಾರಿನ ಹೆಂಡತಿ ಇತ್ತೀಚೆಗೆ ನಿಧನಳಾದಳು. ಮಯ್ಯಳಿಯವರಿಗೆ ಆ ತನಕವೂ ಆಕೆಯ ಮುಖ ನೋಡಲಾಗಲಿಲ್ಲ. ಆಕೆಯ ಬಲತೊಡೆಯನ್ನು ಮಾತ್ರ ಅವರು ಕಂಡಿದ್ದರು. ಮಳೆಯಿಲ್ಲದಿದ್ದಾಗಲೂ ದೊಡ್ಡ ಕೊಡೆ ಹಿಡಿದುಕೊಂಡು ಮುಖಮುಚ್ಚಿ ಅವರು ನಡೆದಾಡುತ್ತಿದ್ದರು. ನಡೆಯುವಾಗ ಎಡಸೊಂಟಕ್ಕೆ ಎಳೆದುಕಟ್ಟುವ ಮುಂಡಿನ ಮುಂಭಾಗ ಬಾಯಿಬಿಡುವುದರಿಂದ ಬಲಕಾಲಿನ ಮೀನಖಂಡ ಹೊರಗೆ ಕಾಣಿಸುತ್ತಿತ್ತು. ನಡೆಯುವಾಗ ವೇಗ ಹೆಚ್ಚಿದ್ದರೆ ಅದಕ್ಕನುಗುಣವಾಗಿ ಕಾಲಿನ ಮೊಣಗಂಟೂ ಆಮೇಲೆ ತೊಡೆಯೂ ಕಾಣಿಸುತ್ತಿತ್ತು. ಹಾಗೆ ನಡೆಯುವ ಕ್ರಮಗತಿಗನುಗುಣವಾಗಿ ತೆರೆಯುವ ಮುಚ್ಚುವ ಮುಂಡಿನೆಡೆಯಿಂದ ಪ್ರತ್ಯಕ್ಷವಾಗುವ ಹಾಗೂ ಅಪ್ರತ್ಯಕ್ಷವಾಗುವ ತೊಡೆಯ ಬಿಳುಪು ಈಗ ಬರಿಯೊಂದು ಮಯ್ಯಳಿನೆನಪು ಮಾತ್ರ. </p>
<p> ಹನ್ನೆರಡು ವರ್ಷಕ್ಕೆ ಮೊದಲು ಕೊಲಂಬೋದಿಂದ ಉಸ್ಮಾನ್ ಹಾಜಿ ತಂದುಕೊಟ್ಟ ಕೊಡೆಯನ್ನು ಅಸ್ಸನಾರ್ ಆಗಲೂ ಉಪಯೋಗಿಸುತ್ತಿದ್ದುದು. ಅಲ್ಫೋನ್ಸಯ್ಯನ ಬೂಟ್ಸೂ ಆ ಕೊಡೆಯೂ ಒಂದೇ ರೀತಿ. ಅದನ್ನು ಬಿಡಿಸಿಹಿಡಿದು ಮೇಲಕ್ಕೆ ನೋಡಿದರೆ ನರೆತ ಬಟ್ಟೆಯಲ್ಲಿ ನೀಲರಂಧ್ರಗಳು ಹೊಳೆಯುವುದು ಕಾಣಬಹುದು. </p>

<p> 'ದುಡ್ಡಿಲ್ಲಿದ್ರೆ ಎರಡು ಬೆಂಕಿಪೆಟ್ಟಿಗೆ ಕೊಡಿ.' </p>

<p> ಇಂದ್ರನ್ ಹೇಳಿದ. ಇತ್ತೀಚೆಗೆ ಅವನು ಬೀಡಿಸೇದಲು ಪ್ರಾರಂಭಿಸಿದ್ದ. ಅದು ಗೊತ್ತಾದಾಗ ಮಡಿವಾಳ್ತಿ ಅವನನ್ನು ಹೊಡೆಯಲು ಹೋಗಿದ್ದಳು. </p>

<p> ಎರಡು ಒಂಟೆ ಮಾರ್ಕಿನ ಬೆಂಕಿಪೆಟ್ಟಿಗೆಗೆ ಬದಲಾಗಿ ಎರಡು ಟಿಕೇಟು ಹರಿದು ಅಸ್ಸನಾರಿಗೆ ಕೊಟ್ಟ. ಆಮೇಲೆ ಕುಮಾರನ್ ವೈದ್ಯರು ನೋಡುತ್ತಿಲ್ಲವೆಂಬುದನ್ನು ಖಾತ್ರಿಪಡಿಸಿಕೊಂಡು ಇನ್ನೆರಡು ಟಿಕೇಟುಗಳನ್ನು ಉಚಿತವಾಗಿ ಕೊಟ್ಟ. </p>

<p> ಅಲ್ಲಿಂದ ಹೊರಟ ಇಂದ್ರನ್ ಹತ್ತಿರದ ಟೀಚರ ಮನೆಗೆ ಹೋದ. </p>

<p> 'ಲಾಟ್ರಿ ತೆಗಿಯೋದು ಯಾವಾಗ ವೈದ್ಯರೆ?' </p>

<p> 'ಲಾಟ್ರಿಯಾ? ಹುಚ್ಚುಂಟಾ ಅಸ್ಸನಾರೇ?. ಯಾವತ್ತೂ ತೆಗಿಯದ ಲಾಟ್ರಿಯದು.' </p>

<p> ಕುಮಾರನ್ ನಗಾಡಿದರು. ಅಸ್ಸನಾರಿಗೆ ಏನೂ ಅರ್ಥವಾಗಲಿಲ್ಲ. ಅವರು ಒಂದು ಹೊಸಕೊಡೆಯ ಕನಸುಕಾಣುತ್ತಿದ್ದರು. </p>

<p> ಈ ನಡುವೆ ನನಗಾದ ಒಂದು ಅನುಭವವನ್ನು ನಿನಗೆ ಹೇಳಲೆ? ಮಾಂಬಿಯ ಅಮ್ಮನಿಗೆ ಎದೆಯುರಿ ಪ್ರಾರಂಭವಾಗಿ ನಿಲ್ಲುವುದಕ್ಕೂ ಕುಳಿತುಕೊಳ್ಳುವುದಕ್ಕೂ ಕೂಡದಾಯಿತೂಂತ ಗೊತ್ತಾಗಿ ನಾನು ಮಾಂಬಿಯನ್ನು ಕರೆದುಕೊಂಡು ಕರಿಯಾಟ್ಟಕ್ಕೆ ಹೋಗುತ್ತಿದ್ದೆ. ಹೋಗುವ ದಾರಿಯಲ್ಲಿ ಒಂದು ಜೀರ್ಣವಾದ ಶಿವದೇವಾಲಯವಿದೆ. ಅದರ ಸುತ್ತ ಮರಗಳೂ ಬಳ್ಳಿಗಳೂ ದಟ್ಟವಾಗಿ ಅಡರಿಕೊಂಡಿತ್ತು. ನಾವು ನಡೆದುಹೋಗುವಾಗ ದೇಗುಲದ ಎದುರುಭಾಗದಲ್ಲಿದ್ದ ಮನೆಯ ಅಂಗಳದಿಂದ ಒಂದು ಮಗು ಪಟಾಕಿ ಸಿಡಿಸಿತು. ವಿಷು ಹತ್ತಿರ ಬಂತೂಂತ ನಿಂಗೊತ್ತಲ್ಲ? ಪಟಾಕಿಯ ಸದ್ದಿನೊಂದಿಗೆ ಜೀರ್ಣಿಸಿದ ಆ ದೇವಾಲಯದೊಳಗಿನಿಂದ ಒಂದು ಗುಂಪು ಪಾರಿವಾಳಗಳು ಎದ್ದು ಹಾರಿದುವು. ಮಾಂಬಿಯ ತಾಯಿಯನ್ನು ನೋಡಿದ ಮೇಲೆ ನಾವು ಅದೇ ದಾರಿಯಾಗಿ ಹಿಂದಿರುಗಿ ಬರುತ್ತಿದ್ದೆವು. ಆಗ ದೇವಾಲಯದ ಎದುರು ಭಾಗದಿಂದ ಘೋಷಣೆ ಕೂಗುತ್ತ ಕಮ್ಯೂನಿಷ್ಟರ ಮೆರವಣಿಗೆ ಹೋಗುತ್ತಿತ್ತು. ಅದಾಗಲೇ ಮಗು ಸಿಡಿಸಿದ ಪಟಾಕಿಗಿಂತ ದೊಡ್ಡ ಶಬ್ದವನ್ನು ಕಮ್ಯೂನಿಷ್ಟರು ಸೃಷ್ಟಿಸಿದ್ದರು. ಆದರೂ ದೇವಾಲಯದಿಂದ ಒಂದು ಪಾರಿವಾಳವೂ ಹೊರಕ್ಕೆ ಬರಲಿಲ್ಲ. ಮಾಂಬಿಯೊಂದಿಗೆ ದೋಣಿದಾಟುವಾಗ ನಾನು ಅದರ ಬಗ್ಗೆ ಆಲೋಚಿಸಿದೆ. ಮೆರವಣಿಗೆಯ ಕಿವಿಗಡಚಿಕ್ಕುವ ಶಬ್ದ ಕೇಳಿಯೂ ಹೆದರದ ಪಾರಿವಾಳಗಳು ಯಾಕೆ ಒಂದು ಪಟಾಕಿಯ ಶಬ್ದಕ್ಕೆ ಹಾರಿಹೋದುವು? ಆ ಪಟಾಕಿಯ ಶಬ್ದವನ್ನು ಒಂದು ಕೋವಿಯ ಶಬ್ದವೆಂಬುದಾಗಿ ಅವುಗಳು ಭಾವಿಸಿರಬೇಕು. ನಾನು ಹೇಳುತ್ತ ಬಂದಿರುವ ವಿಷಯದ ಬಹುಮುಖ್ಯ ಅಂಶ ಇಲ್ಲೇ ಇದೆ. ಆ ಶಿವ ದೇವಾಲಯದಲ್ಲಿ ಎಂದೇನೂ ಅಲ್ಲ; ಆ ಗ್ರಾಮದಲ್ಲೆಲ್ಲೂ ಯಾರ ಕೈಯಲ್ಲೂ ಕೋವಿಯಿಲ್ಲ. ಯಾವ ಬೇಟೆಗಾರನೂ ಅಲ್ಲಿಗೆ ಬಂದು ಗುಂಡು ಹಾರಿಸುವುದಿಲ್ಲ. ಹಾಗಿದ್ದರೆ ಕೋವಿಯ ಸದ್ದೇ ಕೇಳಿರದ ಆ ಪಾರಿವಾಳಗಳಿಗೆ ಕೋವಿಗೆ ಹೆದರಬೇಕೆಂಬುದು ಹೇಗೆ ಮನವರಿಕೆಯಾಯಿತು? ನಾಡಿನ ಯಾವುದೋ ಭಾಗದಲ್ಲಿ ನೂರಾರು ವರ್ಷಗಳಿಂದ ಬದುಕಿರುವ ಪಕ್ಷಿಗಳನ್ನು ಬೇಟೆಗಾರರು ಗುಂಡುಹಾರಿಸಿ ಕೊಂದ ತಿಳುವಳಿಕೆ ತಲೆಮಾರುಗಳ ಜೀನುಗಳ ಮೂಲಕ ಅವುಗಳಿಗೆ ತಲುಪಿದ್ದಲ್ವೆ? ಹಾಗೆಯೇ ನಮ್ಮ ಕುಟುಂಬದ ಗಂಡಸರಿಗೆ ಆಯುರ್ವೇದ ಕಲಿತರೂ ಕಲಿಯದಿದ್ದರೂ ಚಿಕಿತ್ಸೆಯ ವಿಧಿವಿಧಾನಗಳ ಬಗ್ಗೆ ತಿಳುವಳಿಕೆಯಿರುತ್ತದೆ. ಹಾಗಿದ್ದೂ ನಿನ್ನ ಕುಮಾರನ್ ವೈದ್ಯರು ಹೀಗಾದದ್ದು ಆಯುರ್ವೇದ ಶಾಸ್ತ್ರದ ಬಗೆಗಿನ ಅಪನಂಬಿಕೆಯಿಂದಲ್ಲ. ನೀನು ನನ್ನನ್ನು ಅಗಲಿದ ಆ ದಿನದಿಂದ ಮೊದಲ್ಗೊಂಡು - ತಲೆಮಾರು ನನಗೆ ಒದಗಿಸಿಕೊಟ್ಟ ಶಾಸ್ತ್ರವನ್ನು ಬಳಸಿ ನಿನ್ನನ್ನು ನನಗೆ ಬದುಕಿಸಲು ಸಾಧ್ಯವಾಗದೇ ಹೋದ ಆ ದಿವಸಗಳಿಂದ ಮೊದಲ್ಗೊಂಡು - ನನಗೆ ನನ್ನಲ್ಲೇ ನಂಬಿಕೆಯಿಲ್ಲದೆ ಹೋಯ್ತು. </p>

<p> ಮಾಧವನ ಐಶ್ವರ್ಯದಲ್ಲಿ ಆಡನ್ನು ಸಾಕದ ಚಾತ್ತುವಿನ ಮಗ ಧರ್ಮಪಾಲನಿಗೆ ಅಸೂಯೆ ಮೂಡಿತು. ಫ್ರಾನ್ಸಿನಿಂದ ಬಂದ ತನಗೂ ತನ್ನ ಹಾಗಿರುವವರಿಗೂ ಮಾತ್ರ ಮಯ್ಯಳಿಯ ಸಂಪನ್ನತೆ ಸಂಬಂಧಪಟ್ಟದ್ದು ಎಂಬುದಾಗಿ ಆತ ಭಾವಿಸಿದ್ದ. ಗಲ್ಫಿನ ಮರುಭೂಮಿಗಳಲ್ಲಿ ಇಷ್ಟೆಲ್ಲ ಸಂಪತ್ತು ಇದೆ ಎಂಬುದಾಗಿ ಆತ ಊಹಿಸಿರಲಿಲ್ಲ. ಮಾಧವನ್ ಬೀದಿಗಿಳಿದಾಗ ಮಯ್ಯಳಿಯ ಜನರು ಆತನ ಹಿಂದಿನಿಂದ ಸಣ್ಣಗೆ ಕೆಮ್ಮುತ್ತ ನಡೆಯುತ್ತಿದ್ದರು. ಕ್ಷೌರಿಕ ರಾಮನ್, ಒದೇನನ್, ಕೊಡೆ ರಿಪೇರಿ ಮಾಡುವ ಚೋಯಿಯಣ್ಣ (ಆರುಪುರೆಯ ಕಡುಜನ ಮಾಳಿಗೆಯಲ್ಲಿ ಆದಿಬಿಲ್ಲವನಿಗೆ ಆತನೆ ಬಲಿವಾಡು ಅರ್ಪಿಸುತ್ತಿದ್ದುದು.) ತೋಟಿ ಮರಿಯಮ್ಮ - ಎಲ್ಲರೂ ಮಾಧವನ ಹಿಂದೆಯೇ ನಡೆಯುತ್ತಿದ್ದರು. ಒಳಗೆಲ್ಲ ಕಾಣಿಸುವ ಟರ್‌ಲಿನ್ ಷರ್ಟಿನ ಕಿಸೆಯಿಂದ ನೋಟುಗಳನ್ನು ತೆಗೆದು ಆತ ಎಡಕ್ಕೂ ಬಲಕ್ಕೂ ಹಂಚುತ್ತಿದ್ದ. </p>

<p> 'ಅವನದ್ದು ಕಾಳಸಂತೆ' ಧರ್ಮಪಾಲನ್ ಹೇಳಿದ. </p>

<p> ಕಾಳಸಂತೆ ಎಂದರೆ ಏನೆಂಬುದಾಗಿ ಕ್ಷೌರಿಕ ರಾಮನಿಗೋ ಒದೇನನಿಗೋ ಕಪ್ಪಿಯಾರಿಗೋ ಗೊತ್ತಿರಲಿಲ್ಲ. ಅದು ಹೇರಳ ದುಡ್ಡುಸಿಕ್ಕುವ ಒಂದು ದೊಡ್ಡ ಹುದ್ದೆ  ಎಂದಷ್ಟೆ ಅವರು ತಿಳಿದಿದ್ದರು. ಆದ್ದರಿಂದ ಕ್ಷೌರಿಕ ರಾಮನ್ ಮಡಿವಾಳರ ಇಂದ್ರನಿಗೆ ಹೇಳಿದ: </p>

<p> 'ನೀ ಯಾಕೆ ಹೀಗೆ ಮಾರ್ಗ ಅಳೀತಾ ನಡೆಯೋದು? ನೀ ಹೋಗಿ ಕಾಳಸಂತೆ ಮಾಡ್ಬಾರ್ದಾ ಮಗಾ?' </p>

<p> 'ನಾ ಊರುಬಿಟ್ಟು ಎಲ್ಲಿಗೂ ಹೋಗೋದಿಲ್ಲ.' </p>

<p> ಕಳ್ಳಸೋಡ್ತಿ ಮಾಡಿಯೂ, ದುಡ್ಡು ಸಂಗ್ರಹಕ್ಕೆ ನಡೆದಾಡಿಯೂ ಹೊಟ್ಟೆ ತುಂಬಿಸಿಕೊಳ್ಳುವ ದಾರಿ ಕಂಡುಕೊಂಡಿದ್ದ ಇಂದ್ರನ್ ಹೇಳಿದ. ಅವನಿಗೆ ಕ್ಷೌರಿಕನ ಮಗಳು ಮಲ್ಲಿಕಾಳೊಂದಿಗೆ ಪ್ರೇಮ. ಆದ್ದರಿಂದ ಯಾವತ್ತೂ ರಾಮನ ಮನೆಯ ಸುತ್ತಮುತ್ತಲೇ ಅಲೆದಾಡುತ್ತಿದ್ದ. ಈ ನಡುವೆ ಆತ ನಡೆಸುತ್ತಿದ್ದ ಎಲ್ಲ ಸೋಡ್ತಿಗಳ ಮೊದಲನೆಯ ಬಹುಮಾನ ಸತತವಾಗಿ ಮಲ್ಲಿಕಾಳಿಗೇ ಸಿಗುತ್ತಿತ್ತು. ಕುಂಭ ತಿಂಗಳಲ್ಲಿ ನಡೆಸಿದ ಸೋಡ್ತಿಯ ಮೊದಲ ಬಹುಮಾನ ಕೊಡೆಯಾಗಿತ್ತು. ಅದನ್ನು ಹಿಡಿದುಕೊಂಡು ಅವಳು 'ಮಾನಂಕರ ತೀರ' ಸಿನಿಮಾ ನೋಡುವುದಕ್ಕೆ ಹೋಗಿದ್ದಳು. ಅಲ್ಫೋನ್ಸಯ್ಯ ಹಲವು ಸಲ ಸೋಡ್ತಿಯ ಟಿಕೇಟು ತೆಗೆದಿದ್ದರೂ ಒಂದು ಬಹುಮಾನವೂ ಬಂದಿರಲಿಲ್ಲ. ನಿರಂತರ ಟಿಕೇಟು ತೆಗೆಯುವ ಕುಮಾರನ್ ವೈದ್ಯರಿಗೂ ಬಂದಿರಲಿಲ್ಲ. </p>

<p> ತೂತು ಬಿದ್ದುದಾಗಿದ್ದರೂ ಅಂಚಿನಲ್ಲಿ ಕೆಂಪುನೂಲಿನಿಂದ ಹೆಸರು ಹೊಲಿದ ಒಂದು ಕೊಡೆ ಎಲ್ಸಿಯ ಬಳಿ ಇತ್ತು. ಬಿಸಿಲಿಗೆ ಒಣಗುವುದಕ್ಕಿಟ್ಟಿದ್ದ ಆ ಕೊಡೆಯನ್ನೂ ಒಬ್ಬ ಭಿಕ್ಷುಕ ಕದ್ದುಕೊಂಡು ಹೋದ. ಮಳೆಗಾಲದಲ್ಲಿ ಶಾಲೆಗೆ ಹೋಗುವಾಗ ಹಿಡಿಯುವುದಕ್ಕೆ ಅವಳಿಗೆ ಬೇರೆ ಕೊಡೆಯಿರಲಿಲ್ಲ. </p>

<p> 'ಅವ ಹುಳುಬಿದ್ದು ಸತ್ತೋಗ್ಲಿ.' ಮಗ್ಗಿಬಾಯಿ ಭಿಕ್ಷುಕನನ್ನು ಶಪಿಸಿದರು. </p>

<p> ಎಲ್ಸಿಗೆ ಮಳೆಗಾಲದಲ್ಲಿ ಹಿಡಿಯಲು ಕೊಡೆಯಿಲ್ಲ. ಕ್ರಿಸ್‌ಮಸ್‌ಗೆ ಧರಿಸಲು ಹೊಸ ಬಟ್ಟೆಯಿಲ್ಲ. ಏನಿಲ್ಲದಿದ್ದರೂ ಚೆನ್ನವಿದೆಯಲ್ಲ ಎಂಬ ಸಮಾಧಾನವಿತ್ತು. ಆದರೆ, ಚೆನ್ನವೆಲ್ಲ ಒಪ್ಪದ್ದಾಗಿ ಬದಲಾಯಿತು. </p>

<p> ಪಾಂಡಿಚೇರಿಯಿಂದ ಬಂದ ನಂತರ ಎಲ್ಸಿ ಹೊರಗಿಳಿಯಲಿಲ್ಲ. ಮನೆಯ ಮುಖದ್ವಾರಕ್ಕೂ ಬಂದು ನಿಲ್ಲಲಿಲ್ಲ. ಯಾವತ್ತೂ ಅವಳ ಕೋಣೆಯಲ್ಲಿ ಮಲಗಿಯೇ ಇರುವಳು. ಬಿಸಿಲು, ಗಾಳಿ ಸೋಂಕದೆ ಅವಳು ಇನ್ನಷ್ಟು ಬಿಳಿಚಿದಳು. ಅವಳಿಗೆ ಅವಳೇ ಲೋಕವಾದಳು. ನಂದಾದೀಪದ ಎದುರುಗಡೆ ನಿಂತು ಕೆಲವೊಮ್ಮೆ ಯಾರೂ ಕಾಣದಂತೆ ಅವಳು ಅಳುವಳು. ಆವಳ ಕಣ್ಣಿನ ಬೆಳಕು ನಂದಿತು.  </p>

<p> ಅಲ್ಫೋನ್ಸಯ್ಯನಿಗೆ ಮಗಳನ್ನು ನೋಡುವಾಗ ಸಂಕಟವಾಗುತ್ತಿತ್ತು. ಅವಳೊಮ್ಮೆ ನಗುವುದನ್ನು ನೋಡುವುದಕ್ಕೆ ಅವರು ಆಸೆ ಪಟ್ಟರು. </p>

<p> 'ನಿಂಗೊಂದು ಮೇಜಿಕ್ ತೋರಿಸ್ಲಾ ಮಗೂ?' </p>

<p> ಮ್ಯಾಜಿಕಲ್ಲದೆ ಮತ್ತೇನೂ ಅವರಿಗೆ ಗೊತ್ತಿರಲಿಲ್ಲ. ಮಗಳನ್ನು ಖುಷಿಪಡಿಸುವುದಕ್ಕೆ... </p>

<p> ಅವಳು ಪ್ರತ್ಯುತ್ತರ ಹೇಳದೆ ನೆಲನೋಡಿ ಕುಳಿತಳು. ಅವಳ ಮನಸ್ಸು ಹೇಳಿತು : ಗಾಳಿಯಲ್ಲಿ ಹ್ಯಾಟುಗಳನ್ನು ಸೃಷ್ಟಿಸುವಂತೆ ಶಶಿಯನ್ನು ಸೃಷ್ಟಿಸಿ ನನಗೆ ತೋರಿಸಿ ಅಪ್ಪಾ... </p>

<p> ಅವಳು ಸಣ್ಣ ಮಗುವಾಗಿದ್ದ ಕಾಲದಲ್ಲಿ ಅವರು ಅವಳಿಗೆ ತೋರಿಸಿ ಕೊಡುತ್ತಿದ್ದ ಒಂದು ಜಾಲವಿದ್ಯೆಯಿತ್ತು. ಹ್ಯಾಟ್ ತೆಗೆಯಬೇಕಿದ್ದರೆ ಒಳಗಿನ ಹೆಣ್ಣು ಬೊಂಬೆಯ ಮುಖದಲ್ಲಿ ಕೊಂಬುಮೀಸೆ. ಅದನ್ನು ನೋಡಿ ಎಳೆಯ ಎಲ್ಸಿ ಕೇಕೆ ಹಾಕಿ ನಗುತ್ತಿದ್ದಳು. ಅವರು ಆ ಬೊಂಬೆಯನ್ನು ಹುಡುಕಿ ತಂದರು. ಅದರ ನೆರಿಗೆಗಳಿಂದ ಕೂಡಿದ ಬಿಳಿಯ ಬಟ್ಟೆ ಮಣ್ಣು ಹಿಡಿದು ಬಣ್ಣಗುಂದಿತ್ತು. ಸ್ವರ್ಣವರ್ಣದಿಂದ ಕೂಡಿದ ತಲೆಗೂದಲು ಎರ್ರಾಬಿರ್ರಿಯಾಗಿತ್ತು. ಆ ಬೊಂಬೆಯನ್ನು ಎಲ್ಸಿಯ ಎದುರಿಟ್ಟು ಅವರು ಹ್ಯಾಟಿನಿಂದ ಅದನ್ನು ಮುಚ್ಚಿ ತನ್ನ ಅಗಲವಾದ ಅಂಗೈಯನ್ನು ಅದರ ಮೇಲಿನಿಂದ ಹಾಯಿಸಿದರು. ಹ್ಯಾಟು ಎತ್ತಿದಾಗ ಗೊಂಬೆಯ ಮುಖದಲ್ಲಿ ಕೊಂಬುಮೀಸೆ... </p>

<p> ಕಾರ್ಮೋಡಗಳ ಮಧ್ಯದಿಂದ ಬಿಳಿಯದಾಗಿ ಸಪೂರಕ್ಕೆ ಬೆಳಕು ಹರಿದು ಬಂತೋ ಎಂಬಂತೆ ತಮ್ಮ ಮಗಳ ಮುಖ ಅರಳುತ್ತ ಬರುವುದನ್ನು ಅವರು ಕಂಡರು. </p>

<p> 'ನಿಂಗಿನ್ನೂ ಮೇಜಿಕ್ ನೋಡ್ಬೇಕಾ ಮಗೂ?' </p>

<p> 'ಬೇಡ.' </p>

<p> ಅವಳು ನಕ್ಕಳು.  </p>

<p> ಎಷ್ಟೋ ದಿವಸಗಳ ಬಳಿಕ ತನ್ನ ಮಗಳ ಮುಖದಲ್ಲಿ ಕಂಡ ಆ ನಗೆ ಅಲ್ಫೋನ್ಸಯ್ಯನ ಮನಸ್ಸಿನಲ್ಲಿ ತಂಪು ಹರಡಿತು. ಎಲ್ಲಾ ದುಃಖವನ್ನೂ ನೀಗಿಸುವುದಕ್ಕೋ ಎಂಬಂತೆ ಅವರ ದೊಡ್ಡ ಕೈಗಳು ಮಗಳ ಕಡೆಗೆ ಚಲಿಸಿದುವು. ತನ್ನ ಮಡಿಲಲ್ಲಿ ಕುಳ್ಳಿರಿಸಿ ಒಂದು ಪುಟ್ಟ ಮಗುವನ್ನೋ ಎಂಬಂತೆ ಅವರು ಅವಳನ್ನು ಮುದ್ದಾಡಿದರು. ಅವರ ಅಗಲವಾದ ಎದೆಯಲ್ಲಿ ತಲೆ ಆನಿಸಿಟ್ಟು ಆ ಎದೆಯೊಳಗಿನ ದೊಡ್ಡ ಹೃದಯದ ಬಡಿತವನ್ನು ಅವಳು ಆಲಿಸಿದಳು. ಒಂದು ಶಾಂತಿಮಂತ್ರವೋ ಎಂಬಂತೆ ತಂದೆಯ ಹೃದಯದ ಮಿಡಿತ ಅವಳಿಗೆ ನೆಮ್ಮದಿಯನ್ನು ನೀಡಿತು. ಮಯ್ಯಳಿಯ ವಿಧಿರೇಖೆಗಳಿಂದ ಕೂಡಿಕೊಂಡಿರುವ ವಿಶಾಲ ಕೈಯಿಂದ ಅವರು ತನ್ನ ಮುಗ್ಧ ಮಗಳ ಎಣ್ಣೆಪಸೆಯಿಲ್ಲದ ಕೂದಲನ್ನು ನೇವರಿಸಿದರು. </p>

<p> ಒಬ್ಬರು ಮಣ್ಣು ಕಲಸುತ್ತಿದ್ದರು. ಚಾತ್ತುವಿನ ಮೈಮೇಲೆ ಮತ್ತೆಯೂ ಒಣಗಿದ ಸೋಗೆಗಳನ್ನು, ಗೆರಟೆಗಳನ್ನು ಪೇರಿಸಿದರು. </p>

<p> ಅದರ ಮೇಲೆ ಕಲಸಿದ ಮಣ್ಣನ್ನು ಗೋರಿಹಾಕಿ ಮೆತ್ತಿ ಚಾತ್ತುವನ್ನು ಮುಚ್ಚಿದರು. ಹೊಸಮಳೆಯ ಪರಿಮಳವಿರುವ ಕಲಸಿದ ಮಣ್ಣಿನಡಿಯಲ್ಲಿ ಅವರು ಸ್ವಲ್ಪ ಸ್ವಲ್ಪವೇ ಮರೆಯಾದರು.  </p>

<p> ‘ಬೆಂಕಿ ಹಚ್ಚು.’ </p>

<p> ಧರ್ಮಪಾಲನ್ ಒಂದು ಬೆಂಕಿಕೊಳ್ಳಿಯಿಂದ ಒದ್ದೆ ಮಣ್ಣಿನ ಎಡೆಯ ಒಂದು ತೂತಿನ ಮೂಲಕ ಬೆಂಕಿ ಹಚ್ಚಿದ. </p>

<p> ‘ಕೆಂಡ ಗೋರಿ ಹಾಕು.’ </p>

<p> ಆತ ಉರಿಯುತ್ತಿದ್ದ ಗೆರಟೆಯ ಕೆಂಡವನ್ನು ಒಂದು ನೀಳ ಸೌಟಿನಲ್ಲಿ ಗೋರಿಹಾಕಿದ.  </p>

<p> ಶವವನ್ನು ಮುಚ್ಚಿದ ಮಣ್ಣಿನೆಡೆಯಿಂದ ಗೆರಟೆಗಳೂ ಮಡಲುಗಳೂ ಹೊಗೆಯುತ್ತ ಹೊತ್ತಿದವು. ಮೇಲಿನ ದ್ವಾರಗಳಿಂದ ಬೆಂಕಿ ಮೇಲಕ್ಕೇರಿತು. ಆ ಹೊಗೆಯ ನಡುವಿನಿಂದ ಒಂದು ಕೆಂಪು ಜ್ವಾಲೆ ಉರಿದು ಮರೆಯಾಯಿತು. ಅದು ಚಾತ್ತುವಿನ ಮೈಮೇಲಿದ್ದ ಕೆಂಪು ರೇಷ್ಮೆ ಬಟ್ಟೆ. ಚಾತ್ತು ಹೊಗೆಯಾಗಿ ಬೆಂಕಿಯ ಕೆಂಡವಾಗಿ ಪರಿವರ್ತನೆಗೊಂಡರು. ಆಗ ಅವರು ಆಡನ್ನು ಸಾಕುವ ಚಾತ್ತುವೋ ಆಡನ್ನು ಸಾಕದ ಚಾತ್ತುವೋ ಆಗಿರಲಿಲ್ಲ. ಬರಿಯ ಚಾತ್ತುವಾಗಿದ್ದರು. </p>

<p> ‘ಹಾಗಿದ್ರೆ ಇನ್ನು ಹೋಗುವಾ.’ </p>

<p> ಅದನ್ನು ಕೇಳಿ ಧರ್ಮಪಾಲನ್ ಸುಗಂಧಭರಿತ ಕರವಸ್ತ್ರದಿಂದ ಕಣ್ಣುಜ್ಜಿಕೊಳ್ಳುತ್ತಾ ಫಲ್ಗುಣನ ಜೊತೆಗೆ ಹಿಂದಕ್ಕೆ ನಡೆದ. ಜನರ ಗುಂಪು ಕಿರಿದಾಗತೊಡಗಿತು. ಒಬ್ಬೊಬ್ಬರಾಗಿ ಬೇರೆ ಬೇರೆ ಕಡೆಗೆ ನಡೆದು ಮರೆಯಾದರು. </p>

<p> ಕ್ರಮೇಣ ಚಾತ್ತುವಿನ ಮಯ್ಯಳಿಶರೀರ ಉರಿಯುವಾಗಿನ ವಾಸನೆ ಗಾಳಿಯಲ್ಲಿ ಹರಡಿತು. ಹರಡುತ್ತ ಅದು ಅಲ್ಫೋನ್ಸಯ್ಯನ ಮನೆಯವರೆಗೆ ತಲುಪಿತು. ಮಗ್ಗಿಬಾಯಿ ಮೂಗುಮುಚ್ಚಿದರು. ಅವರು ಹೇಳಿದರು: ‘ನಮ್ಮಾಗೆ ಈ ಬಿಲ್ಲೋಗರ್ಗೂ ಸತ್ರೆ ಹೊಂಡತೆಗ್ದು ಹುಗೀಬಾರ್ದಾ? ಹೊತ್ತಿಸ್ಲೇಬೇಕೂಂತುಂಟಾ?’ </p>

<p> ಅಲ್ಫೋನ್ಸಯ್ಯ ಮೇಲೆ ನೋಡಿದರು. ಅಲ್ಲಿ ಆಡಿನ ಹಿಂಡು ಮೇಯುತ್ತಿತ್ತು. ಆ ಆಡುಗಳನ್ನು ಶರೀರವಿಲ್ಲದ ಚಾತ್ತು ಹೊಡೆದುಕೊಂಡು ಹೋಗುತ್ತಿದ್ದರು. ಸಂಜೆ ಬಿದ್ದ ಮಳೆಗೆ ಆಡಿನ ಹಾಲಿನ ಪರಿಮಳವಿತ್ತು. ಚಾತ್ತು ಮೇಲೆ ಕುಳಿತು  ಆಡಿನ ಹಾಲು ಕರೆಯುತ್ತಿದ್ದರು. ಅಲ್ಫೋನ್ಸಯ್ಯ ಅಂದುಕೊಂಡರು. ಸಂಜೆ ಮುಗಿಯುವ ಹೊತ್ತಿಗೆ ಹಾಲಿನ ನೊರೆಯಂಥ ಬೆಳದಿಂಗಳು ಮಯ್ಯಳಿ ತುಂಬ ಹರಡಿತ್ತು.  </p>

<p> ‘ನಾವು ತಂದೆಯ ನಲ್ವತ್ತೊಂದನೇ ದಿನ ಆಚರಿಸ್ಬೇಕು. ’ಧರ್ಮಪಾಲನ್ ಅಮ್ಮನಿಗೆ ಹೇಳಿದ: ‘ಊರವರನ್ನೆಲ್ಲ ಕರೀಬೇಕು.’ </p>

<p> ಧನಿಕರೂ ಮನೆತನದವರೂ ಆದವರು ಪ್ರಾಯ ಸಂದು ತೀರಿಹೋದರೆ ನಲುವತ್ತೊಂದನೆಯ ದಿನವನ್ನು ಮದುವೆಯ ಹಾಗೆ ಸಂಭ್ರಮದಿಂದ ಆಚರಿಸುವುದು ಒಂದು ಪದ್ಧತಿ. ಚಾತ್ತು ಅಂಥ ಮನೆತನದವರಲ್ಲದಿದ್ದರೂ ಸಾಯುವ ಕಾಲಕ್ಕೆ ಧನಿಕನಾಗಿದ್ದನಲ್ಲ ! </p>

<p> ಚಪ್ಪರ ಹಾಕಿದರು. ಊರವರನ್ನೆಲ್ಲ ಆಮಂತ್ರಿಸಿದರು. ವಾದ್ಯಘೋಷವೂ ಊಟೋಪಚಾರವೂ ನಡೆಯಿತು. </p>

<p> ತಂದೆಯ ಋಣಸಂದಾಯ ಮಾಡಿದ್ದಕ್ಕೆ ಧರ್ಮಪಾಲನಿಗೆ ನೆಮ್ಮದಿಯಾಯಿತು. </p>

<p> ಚಾತ್ತು ನಿಧಾನವಾಗಿ ಒಂದು ವರ್ಷವಾಗಿದ್ದಾಗ ಒಂದು ದಿವಸ ಮಗ್ಗಿಬಾಯಿ ಹೇಳಿದರು: ‘ಇನ್ನಾದ್ರೂ ನೀ ಒಂದು ಮದ್ವೆ ಮಾಡ್ಬೇಕು, ನಿನ್ನಮ್ಮನಿಗೆ ಸಹಾಯಕ್ಕೆ ಬೇಕಲ್ಲ.’ </p>
<p> ಧರ್ಮಪಾಲನ ಎರಡೂ ಕಿವಿಗಳ ಮೇಲಿನ ಕೂದಲು ನರೆತಿತ್ತು. ದೇಹದ ತೂಕ ಜಾಸ್ತಿಯಾಗುತ್ತಲೇ ಇತ್ತು. </p>
<p> ವಾಂತಿಯ ಶಬ್ದ ಕೇಳಿ ಅರೆ ಮುಚ್ಚಿದ್ದ ಬಾಗಿಲಿನ ಹೊರಗೆ ನಿಂತ ವೈದ್ಯರು ಕೂಗಿದರು. ಅವನೊಬ್ಬ ಹಸುಗೂಸಾಗಿರುತ್ತಿದ್ದರೆ ಆವರು ಬಚ್ಚಲಿನೊಳಕ್ಕೆ ಧಾವಿಸಿ ಅವನನ್ನು ಮಡಿಲಲ್ಲಿ ಮಲಗಿಸಿ ಅವನ ಎದೆಯನ್ನೂ ಬೆನ್ನನ್ನೂ ತಡುವುತ್ತಿದ್ದರು. ಬೆರಳುಗಳ ಮೂಲಕ ಅವನ ತಲೆಯನ್ನು ನೇವರಿಸುತ್ತ ಅವನಿಗೆ ಸಾಂತ್ವನ ನೀಡುತ್ತಿದ್ದರು. ಆದರೆ ಮಗ ದೊಡ್ಡವನಾಗಿದ್ದ. ಬದುಕಲು ವಿಧಿಸದ ಮಗುವೊಂದರ ಅಪ್ಪನೂ ಆಗಿದ್ದ. </p>
<p> ಕುಮಾರನ್ ಕಿವಿನಿಮಿರಿಸಿ ನಿಂತರು. ಒಳಗಿನಿಂದ ಯಾವ ಶಬ್ದವೂ ಕೇಳಿಸಲಿಲ್ಲ. ಶಶಿಯ ದಟ್ಟವಾದ ಶ್ವಾಸೋಚ್ಛ್ವಾರ ಮಾತ್ರ ಕೇಳುತ್ತಿತ್ತು. ಸ್ವಲ್ಪ ಹೊತ್ತು ಕಳೆದ ಮೇಲೆ ನೀರು ಬೀಳುವ ಶಬ್ದ ಕೇಳಿಸಿತು. ಗೋಡೆಯ ಕೆಳಭಾಗದ ತೂಬಿನಿಂದ ಸಾಬೂನಿನ ನೊರೆ ಮಿಶ್ರಿತ ನೀರು ಆಂಗಳದ ಬದಿಯಲ್ಲಿ ಹರಿಯಿತು. ಕುಮಾರನ್ ಚಾವಡಿಗೆ ಮರಳಿಬಂದು ಕುಳಿತರು. </p>
<p> ಮಂದಿಯಮ್ಮ ದೇವರ ಕೋಣೆಗೆ ಹೋಗಿ ಕೈ ಜೋಡಿಸಿ ನಿಂತರು. ಅವರೂ ದೇವರಿಗೆ ಧನ್ಯವಾದ ಹೇಳುತ್ತಿದ್ದರೊ? </p>
<p> ಅಡುಗೆ ಮನೆಯ ಬಾಗಿಲನ್ನು ಆತು ಏನೇನೆಲ್ಲ ಯೋಚಿಸುತ್ತ ನಿಂತಿದ್ದ ಮಾಂಬಿ, ತನಗರಿವಿಲ್ಲದೆಯೆ ಕಣ್ಣೀರು ಹರಿಸುತ್ತಿದ್ದಳು ಕುಮಾರನ್ ಅದನ್ನು ಗಮನಿಸಿದರು. ಅದನ್ನರಿತ ಮಾಂಬಿ ಕೂಡಲೆ ಹಿಂಗೈಯಿಂದ ಕಣ್ಣೊರಸಿಕೊಂಡಳು. </p>
<p> ಮಂದಿಯಮ್ಮೆಗೆ ಮುದಿವಯಸ್ಸಿನಲ್ಲಿ ಸಹಾಯವಾಗಲೆಂದು ಕರೆತಂದ ಮೊಗವೀರ ಹುಡುಗಿ ಇಂದು ಆ ಕುಟುಂಬದ ಸದಸ್ಯೆಯಾಗಿದ್ದಳು. ಕುಮಾರನ್ ವೈದ್ಯರ ಕುಟುಂಬದ ಸುಖದಲ್ಲಿ ಸಂತೋಷ ಪಡುತ್ತಲೂ ದುಃಖದಲ್ಲಿ ಅಳುತ್ತಲೂ ಇದ್ದಳು. </p>
<p> ‘ಶಶಿ ಸೇಂದಿ ಕುಡ್ದಿಯಾನೆ.’ </p>
<p> ‘ಅಡ್ಡಿಯಿಲ್ಲ. ಎಲ್ಲ ಸರಿಯಾಗ್ತದೆ. ಅವ ಮರಳಿ ಬಂದ್ನಲ್ಲ. ನಮಗದು ಸಾಕು.’ ಅವರು ಅವಳನ್ನು ಸಮಾಧಾನ ಪಡಿಸಲೆತ್ನಿಸಿದರು. </p>
<p> ಬಚ್ಚಲು ಮನೆಯ ಬಾಗಿಲು ಕೀರಲು ಧ್ವನಿ ಮಾಡಿತು. ಸ್ನಾನ ಮುಗಿಸಿ ಬಿಳಿ ಬಟ್ಟೆ ಧರಿಸಿ ಶಶಿ ಅಡುಗೆ ಮನೆಯ ದಿಣ್ಣೆಯ ಕಡೆಗೆ ಬಂದ. ಬೆಳೆದ ಗಡ್ಡದಲ್ಲೂ ಕೂದಲಿನಲ್ಲೂ ನೀರ ಹನಿಗಳು ತಂಗಿದ್ದುವು. </p>
<p> ‘ಚೆನ್ನಾಗಿ ತಲೆ ಒರಸು. ಶೀತಾದೀತು.’ ಮಾಂಬಿ ಹೇಳಿದಳು. </p>
<p> ಅಡುಗೆ ಮನೆಯ ಮಣೆಯಲ್ಲಿ ಕುಳಿತು ಶಶಿ ಬಿಸಿಗಂಜಿ ಕುಡಿದ. ಆ ಬಳಿಕ ಒಳಗೆ ಹೋಗಿ ತಂದೆಯ ಮಂಚದಲ್ಲಿ ಮಲಗಿದ. ಆಗ ಕುಮಾರನ್ ವೈದ್ಯರ್ ಮೆಲ್ಲಗೆ ಮಗನ ಬಳಿಗೆ ಬಂದರು. </p>
<p> ‘ಸ್ವಲ್ಪ ಹೊತ್ತು ಮಲಕ್ಕೊ. ಅದೂ ಇದೂ ಯೋಚ್ನೆ ಮಾಡಿ ತಲೆ ಕೆಡಿಸ್ಬೇಡ.’ </p>
<p> ಕುಮಾರನ್ ಬಗ್ಗಿ ಮಗನ ತಲೆಯಲ್ಲಿ ಕೈಯಿರಿಸಿದರು. ಶಶಿಯ ಕೂದಲಿನ ಒದ್ದೆಯು ಕಣ್ಣೀರಿನಂತೆ ಅವರ ಅಂಗೈಯಲ್ಲಿ ಅಂಟಿನಿಂತಿತು. </p>
<p> ‘ನಿನ್ನತ್ರ ಯಾರಿಗೂ ಸಿಟ್ಟಿಲ್ಲ. ನೀ ವಾಪಾಸು ಬಂದದ್ರಲ್ಲಿ ಇಕೋ, ಮೇಲೆ ಕೂತ ನನ್ನಮ್ಮನೂ ಸಂತೋಷ ಪಟ್ಟಿರ್ಬೋದು.’ </p>
<p> ಮಯ್ಯಳಿಯ ಪ್ರತಿಯೊಂದು ಆಗುಹೋಗುಗಳೂ ಅವರಿಗೆ ಗೊತ್ತಿತ್ತು. ಅವರು ಸಮುದ್ರದಾಚೆ ಫ್ರಾನ್ಸಿನಲ್ಲಿದ್ದರೂ ಅವರ ಮನಸ್ಸು ಮಯ್ಯಳಿಯಲ್ಲಿತ್ತು. ಕೇಳುವವರಿಗೆಲ್ಲ ಅಚ್ಚರಿಯೆನಿಸಿತು. </p>
<p> ‘ಬನ್ನಿ ಮಕ್ಳೆ, ಚಾ ಕುಡಿಯುವ.’ ಕಣ್ಣಯ್ಯ ಆಹ್ವಾನಿಸಿದರು. </p>
<p> ಎಲ್ಲರೂ ಚಾದಂಗಡಿಗೆ ಹೋದರು. ಮಿತ್ರನೂ ಶ್ರೀನಿವಾಸನೂ ಬ್ಯಾಗು ಕೆಳಗಿಟ್ಟು ಕಿರುಗುಟ್ಟುವ ಬೆಂಚಿನಲ್ಲಿ ಕುಳಿತರು. ಕನ್ನಡಿ ಕಪಾಟಿನೊಳಗಿನ ವಡೆಯನ್ನೂ ಬಾಡಿಸಿದ ಎಲೆಯಲ್ಲಿ ಇರಿಸಿದ್ದ ಪುಟ್ಟನ್ನೂ ಅವರು ಕಣ್ಣುತುಂಬ ನೋಡಿದರು. ಮಯ್ಯಳಿಯ ಪ್ರತಿಯೊಂದು ಪುಟ್ಟ ದೃಶ್ಯಕೂಡ ಅವರಲ್ಲಿ ಪುಳಕವನ್ನುಂಟುಮಾಡಿತು. ಅದೆಲ್ಲ ಕಂಡು ಮರೆತ ವಿಚಾರಗಳಾಗಿದ್ದುವು. </p>
<p> ‘ನೀವು ಫ್ರಾನ್ಸಿನಿಂದ ಹೇಗೆ ಬಂದದ್ದು ಮಕ್ಳೆ, ಹಡಗಿನಲ್ಲಾ?’ </p>
<p> ‘ಅಲ್ಲ. ನಾವು ಕೊಚ್ಚಿವರೆಗೆ ವಿಮಾನದಲ್ಲಿ ಬಂದೆವು. ಅಲ್ಲಿಂದ ಬಸ್ನಲ್ಲಿ.’ </p>

<p> 'ನಿಮ್ಮ ಅಪ್ಪ-ಅಮ್ಮ ಬರ್ಲಿಲ್ವ? ಅವ್ರೆಲ್ಲೋದ್ರು?' </p>
<p> 'ಅವ್ರು ಬರ್ಲಿಲ್ಲ.' ಮಿತ್ರ ಎಲ್ಲೋ ನೋಡುತ್ತ ಉತ್ತರಿಸಿದ. </p>
<p> 'ಅವ್ರು ಊರನ್ನು ಊರವ್ರನ್ನು ಮರೆತ್ರೂ ನೀವು ಮರೀಲಿಲ್ಲಲ್ಲ ಮಕ್ಳೆ-' ಚೋಯಿಯಣ್ಣ ಹೇಳಿದರು. </p>
<p> ಚಾದಂಗಡಿಯವ ಗ್ಲಾಸಿನಲ್ಲಿ ನೊರೆನೊರೆ ಚಹಾ ತಂದಿಟ್ಟ. </p>
<p> 'ತಿನ್ಲಿಕ್ಕೆಂತ ಬೇಕು?' </p>
<p> ಶ್ರೀನಿವಾಸನ್ ಕನ್ನಡಿ ಪೆಟ್ಟಿಗೆ ತೋರಿಸಿದ. </p>
<p> 'ಪುಟ್ಟೂ ಕಡಲೆಯೂ,' </p>
<p> 'ಎಲ್ರಿಗೂ?' </p>
<p> 'ನಮ್ಗೆ ಬೇಡ. ನಾವು ಗಂಜಿ ಕುಡ್ದು ಬಂದದ್ದಷ್ಟೆ. ನೀವು ತಿನ್ನಿ ಮಕ್ಳೆ.' ಕ್ಷೌರಿಕನೂ ಚೋಯಿಯಣ್ಣನೂ ಹೇಳಿದರು. </p>
<p> ಫ್ರಾನ್ಸಿನಲ್ಲಿರುವ ಬಿಳಿಯ ಬಿಲ್ಲವನ , ಬಿಳಿಯರ ಹಾಗೆಯೇ ಇರುವ ಮಕ್ಕಳು ಪುಟ್ಟು ಕಡಲೆಯನ್ನು ಆಸೆಪಟ್ಟು ತಿನ್ನುವುದನ್ನು ಮಿಕ್ಕವರು ನೋಡುತ್ತ ನಿಂತರು. </p>
<p> 'ಇನ್ನೊಂದು ತುಂಡು ಪುಟ್ಟು.' ಮಿತ್ರನ್ ಕೇಳಿದ. </p>
<p> ಕನ್ನಡಿ ಕಪಾಟದಲ್ಲಿ ಉಳಿದಿದ್ದ ಒಂದು ತುಂಡು ಮಾಡಿ ಹಂಚಿಕೊಂಡು ತಿಂದರು. ಗ್ಲಾಸಿನಲ್ಲಿ ಉಳಿದಿದ್ದ ಚಹಾವನ್ನೂ ಹೀರಿದರು. ಗಟ್ಟಿಹಾಲು ಬೆಣ್ಣೆಗಳಿಂದ ಸಿಗದ ಸಂತೃಪ್ತಿ ಅವರ ಮುಖದಲ್ಲಿ ಮಿನುಗುತ್ತಿತ್ತು. </p>

</body></text>
</Doc>